ಆಯಿತು. ನಾನು ಅಲ್ಲಿ, ನಿಂತೇ ಇಲ್ಲವೇ, ನನಗೆ ಗೊತ್ತಿಲ್ಲದೆ ವಂದ ಮಾಡುತ್ತಿದ್ದೆ. ಅದು ಕಾಲ ಮೇಲೆಲ್ಲ ಹರಿಯಿತು... ಅವ್ವ, 'ಇನ್ನೂ ಎಷ್ಟೊತ್ತಲಾ' ಎಂದಾಗ ಮಳೆಯೇ ಮಾತನಾಡಿದಂತಾಗಿ ಬೆಚ್ಚಿ ಬಿದ್ದೆ. ಅಬ್ಬಾ ಎಂತಹ ಕಂದು ಬಣ್ಣದ ಬೆಳಕು ಇದು... ಅಂತಹ ಬೆಳಕನ್ನು ನಾನು ಎಂದೂ ಕಂಡಿಲ್ಲ. ಹೆಜ್ಜೆ ಇಟ್ಟೆನೋ ಇಲ್ಲವೋ ಎನ್ನುವ ಹಾಗೆ ಗಾಳಿಯಲ್ಲಿ ತೇಲಿದ ಹಾಗೆ ಬಂದು ಮಲಗಿದೆ. ಮತ್ತೆ ಅದೇ ಕಾಣಿಸುತ್ತಿತ್ತು. ಆ ಹೆದರಿಕೆಯಲ್ಲಿ ಯಾವಾಗ ನಿದ್ದೆ ಬಂದಿತ್ತು ಎಂದು ತಿಳಿಯದು. ಆದರೆ, ಬೆಳಿಗ್ಗೆ ಎದ್ದು ನೋಡಿದರೆ ಮಳೆ ಎಲ್ಲವನ್ನೂ ತೊಳೆದುಕೊಂಡ ಹಾಗೆ ಇತ್ತು. ಇಡೀ ಕೇರಿ, ಊರು, ಗಿಡ, ಮರ, ಎಲ್ಲ ಸ್ವಚ್ಛವಾಗಿತ್ತು. ಪ್ರಶಾಂತವಾಗಿತ್ತು. ಆಕಾಶವೆಲ್ಲ ನೀಲಿಮಯವಾಗಿ ನನ್ನ ಹಕ್ಕಿಯಾಗಿಸಿತ್ತು. ನಾನು ರಾತ್ರಿ ಕಂಡಿದ್ದು ಕನಸು. 'ರಾತ್ರಿ ವಂದ ಮಾಡಲಿಕ್ಕೆ ಎದ್ದಿದ್ನ' ಅಂತ ಅವ್ವನ ಕೇಳಿದರೆ, 'ಹುಂ' ಎಂದ ಅವ್ವ, 'ಏನೊ ಒಂದು ಚೊಂಬು ನೀರು ಕುಡಿದಿದ್ದ? ಅಷ್ಟೊಂದು ವಂದ ಮಾಡಿದ್ಯಲ್ಲ' ಅಂದಾಗ ನಾನು ರಾತ್ರಿ ಎದ್ದಿದ್ದು ಖಾತರಿಯಾಯಿತು. ನೀರಿಗೆ ಬಣ್ಣ ಇಲ್ಲ ಅಂತಾರೆ. ಆದರೆ, ರಾತ್ರಿ ಮಳೆ ಒಂಥರ ಬೆಳ್ಳಗೆ ಕಾಣಿಸ್ತಲ್ಲ ಅನ್ನುಸ್ತು. ಇದನ್ನು ಯಾರ ಹತ್ತಿರ ಕೇಳೂದು... ಸರಿ, ಗೆಳೆಯ ರಾಮುನನ್ನೇ ಕೇಳಾನ ಅಂತ ಅವನನ್ನು ಕೇಳಿದೆ. 'ನೀರ್ ಬೆಳ್ಳಗೆ ಇರುತ್ತ ರಾಮು?'. 'ಹುಂ ಮತ್ತೆ. ನೀನು ರಾತ್ರೀಲಿ ಗುಂಡೀಲಿ ನೀರು ನಿಂತಿರುತ್ತಲ್ಲ. ಅದನ್ನು ನಾವು ಕಲ್ಲು ಅಂತ ತಿಳಕೊಂಡು ಕಾಲು ಹಾಕಿದರೆ ಅದು ನೀರು, ಹೌದಾ ಅಲ್ಲವೋ...' ಅಂದ. ಇದೇನೂ ಸರಿಯೋ ತಪ್ಪೋ ಗೊತ್ತಿಲ್ಲ. ನಮ್ಮ ಸ್ನೇಹಿತರೆಲ್ಲ ರಾಮನನ್ನು 'ಬೂರಿ ರಾಮ' ಅಂತ ಕರೆಯೋರು. ಇದೊಂದು ಘಟನೆ ಮಾತ್ರ ನೆನಪಿನ ಮಳೆಯ ಲೋಕದಲ್ಲಿ ಬೆಳಕಿನ ಮಳೆಯಾಗಿ ಭಯದ ಮಳೆಯಾಗಿ ಸುರಿದ ನೆನಪು ಈಗಲೂ ಹಾಗೇ ಇದೆ.

ಮಲೆನಾಡಿನ ಮಳೆಗಾಲದಲ್ಲಿ ಸಮಯ ತಿಳಿಯುವುದಿಲ್ಲ. ಒಮ್ಮೆ ಮಳೆಗಾಲ ಶುರುವಾದರೆ ಮೂರು ನಾಲ್ಕು ತಿಂಗಳ ನಂತರವೇ ಸೂರ್ಯನ ದರ್ಶನವಾಗುತ್ತದೆ. ಬೆಳಗ್ಗೆಯೋ, ಮಧ್ಯಾಹ್ನವೋ, ಸಂಜೆಯೋ... ವಾಚ್ ನೋಡಿಕೊಂಡರೆ ಸಮಯ ತಿಳಿಯುತ್ತದೆ. ಇಲ್ಲವೆಂದರೆ ಸ್ಕೂಲ್ ಬೆಲ್ ಹೊಡೆದಾಗಲೇ ತಿಳಿಯುತ್ತಿತ್ತು. ಮಳೆಗಾಲದಲ್ಲಿ ಮುಂಜಾನೆ ಕೂಡ ಸಂಜೆ ವಾತಾವರಣವೇ ಇರುತ್ತದೆ. ಇನ್ನೇನು ಕತ್ತಲಾಗಿಬಿಡುತ್ತಿದೆ ಅನ್ನಿಸುತ್ತಿದ್ದರೆ ಆಗ ಸಮಯ ಹನ್ನೆರಡು ಆಗಿರುತ್ತಿತ್ತು. ಯಾಕಾದರೂ ಈ ಮಳೆಗಾಲ ಬಂತು ಅನ್ನಿಸುವಷ್ಟು ಬೇಸರ. ಎಷ್ಟು ಕಾದರೂ ಸಂಜೆ ಬೇಗ ಬರುತ್ತಿರಲಿಲ್ಲ. ಆಗೆಲ್ಲ ನಮ್ಮ ಮನೆಗಳಲ್ಲಿ ವಿದ್ಯುತ್ ಇಲ್ಲದ ದಿನಗಳು. ಬರೀ ಸೀಮೆ ಬುಡ್ಡಿ ದೀಪಗಳು. ಆ ಬುಡ್ಡಿ ದೀಪಗಳೇ ಸೂರ್ಯ, ಚಂದ್ರ. ಅದೇ ನಮಗೆ ಟ್ಯೂಬ್ ಲೈಟ್. ಅದೇ 100 ಕ್ಯಾಂಡಲ್ ಬಲ್ಬು. ಅದನ್ನೇ ನೋಡುತ್ತ ಕೂರುವುದು ಒಂದು ರೀತಿಯ ಖುಷಿ. ಏನಾದರೂ ಮೇಷ್ಟ್ರು ಹೇಳಿದ ಹಾಗೆ ಹೋಂವರ್ಕ್ ಮಾಡಲು, ಓದಿಕೊಳ್ಳಲು ಕುಳಿತರೆ ಹೊರಗೆ ಸುರಿಯುತ್ತಿರುವ ಮಳೆಯ ಸದ್ದಿಗೆ ಬರೆಯುವುದು ಓದುವುದು ಬಿಟ್ಟು ದೀಪ ನೋಡುತ್ತ ಕೂರುವುದು, ಹಾಗೆಯೇ ತೂಕಡಿಸುತ್ತ ಮುಂಗೂದಲು ಸುಟ್ಟುಕೊಂಡಿದ್ದು ಇದೆ. ಅವ್ವ ಕೂದಲು ಸುಟ್ಟ ವಾಸನೆ ಹಿಡಿದು ಬೆನ್ನಿಗೆ ಗುದ್ದಿ, 'ಓದು ಅಂದ್ರೆ ತೂಕಡಿಸುತ್ತಾ ಕುಳಿತಾನೆ... ಏಳು... ಉಣ್ಣೇಲು' ಎಂದಾಗಲೇ ಎಚ್ಚರ.

ಜನ ಕೆಲವೊಮ್ಮೆ ನೀರಿಗಾಗಿ ಸಾವಿರ, ಒಂದೂವರೆ ಸಾವಿರ ಅಡಿ ಭೂಮಿ ಕೊರೆಸಿದರೂ ನೀರು ಸಿಗುವುದಿಲ್ಲ. ಆದರೆ, ನಮ್ಮೂರ ಕಡೆ ಮಳೆಗಾಲದಲ್ಲಿ ಮಳೆಯ ಹನಿಯ ಹೊಡೆತಕ್ಕೆ ಭೂಮಿ ಮೃದುವಾಗಿ ನೆಲದಲ್ಲಿ ನೀರು ಉಕ್ಕುತ್ತದೆ. ನಾವು ತಿರುಗಾಡುವ ಜಾಗದಲ್ಲಿ ಕಾಲಿನ ಹೆಬ್ಬೆಟ್ಟಿನ ತುದಿಯಿಂದ ನೆಲ ಅದುಮಿದರೆ ಬುಳುಬುಳು ಅಂತ ಗುಳ್ಳೆ ಬಂದು ತಿಳಿನೀರು ಉಕ್ಕುತ್ತಿತ್ತು. ಅದನ್ನು ನಾವು ಒರವು ಎನ್ನುತ್ತಿದ್ದೆವು. ಮಲೆನಾಡಿನಲ್ಲಿ ಕೆಲವರ ಮನೆಯೊಳಗೆ ಒರವು ಬರುತ್ತಿತ್ತು. ನಮಗೆ ನೀರಿನ ಮೇಲೆ ಬದುಕುತ್ತಿದ್ದೇವಲ್ಲ ಅನ್ನಿಸುತ್ತಿತ್ತು. ನೀರಿಲ್ಲದೆ ಬದುಕನ್ನು ಕಲ್ಪಿಸಿಕೊಳ್ಳುವುದೇ ಸಾಧ್ಯವಿಲ್ಲ. ಹಳ್ಳಕೊಳ್ಳವಾಗಿ ನದಿಯಾಗಿ ಸಕಲ ಜೀವವನ್ನೂ ಪೊರೆಯುವ ಈ ನೀರು ಅಮೃತವಲ್ಲದೆ ಇನ್ನೇನು...

ಮತ್ತೆ ಮಳೆ ಹೊಯ್ಯುತಿದೆ... ಎಲ್ಲ ನೆನಪಾಗುತಿದೆ... ಅನಂತಮೂರ್ತಿ, ಮಹಾಮಳೆಯ ಮಳೆಗಳಲ್ಲಿ ಮದುಮಗಳು, ಒಡಲಾಳದ ಮಹಾದೇವ... ಹೀಗೆ ನಾನು ನೀವು ಎಲ್ಲರೂ ಮಳೆಯಲ್ಲಿ... ಮಳೆಯ ನೆನಪಿನಲ್ಲಿ...

●